ಅಸಲು ದಾವಾ ನಂ. :327/2021
ಪಿ ಡಬ್ಲೂ:1

(ಇಂದು ದಿನಾಂಕಃ **11-02-2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)

ಮುಂದುವರಿದ ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಾದ ಶ್ರೀ ಕೆ ವಿ ಆರ್ ರವರಿಂದಃ

ದಾವಾ ಸ್ವತ್ತಿಗೆ ಸಂಬಂದಿಸಿದಂತೆ ಬಾಡಿಗೆ ಕರಾರು ಪತ್ರ ಮತ್ತು ಬಾಡಿಗೆ ಸ್ವೀಕರಿಸಿದಕ್ಕೆ ಸಂಬಂದಿಸಿದಂತೆ ರಶೀದಿಯನ್ನು ಹಾಜರು ಪಡಿಸಿರುವುದಿಲ್ಲ. ಪ್ರತಿವಾದಿಯರು ದಾವಾ ಸ್ವತ್ತನ್ನು ಬಾಡಿಗೆ ಪಡೆದಿಲ್ಲ ಮತ್ತು ವಾಸವಾಗಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಯ ಪಶ್ಚಿಮ ಮತ್ತು ದಕ್ಷಿಣ ದಿಕ್ಕಿಗೆ ಮನೆ ಇರುತ್ತದೆ ಎಂದುದಾವಾ ಅನುಸೂಚಿಯಲ್ಲಿ ನಮೂದಿಸಿರುತ್ತೇನೆ. ದಾವಾಸ್ತಿಯ ಪಶ್ಚಿಮ ಮತ್ತು ದಕ್ಷಿಣ ದಿಕ್ಕಿಗೆ ಮನೆ ಇರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ.

ನಿಪಿ-1 ಖರೀದಿ ಪತ್ರದ ಪ್ರಕಾರ 2 ನಿವೇಶನಗಳನ್ನು ಖರೀದಿಸಿರುತ್ತೇವೆ. ಸದರಿ 2 ನಿವೇಶನಗಳ ಉತ್ತರ ದಿಕ್ಕಿಗೆ ದಾವಾ ಸ್ವತ್ತು ಬರುತ್ತದೆ. ಸದರಿ 2 ನಿವೇಶನಗಳ ನಡುವೆ ಪ್ರತಿವಾದಿಯರ ಮನೆ ಬರುತ್ತದೆ. ಸದರಿ ಮನೆಯಲ್ಲಿ ಪ್ರತಿವಾದಿಯರು ವಾಸವಾಗಿರುತ್ತಾರೆ. ನಿಪಿ-1 ಖರೀದಿ ಪತ್ರದಲ್ಲಿ ನಮೂದಿಸಿದ ಚಕ್ಕುಬಂದಿ ಪ್ರಕಾರ 2 ನಿವೇಶನಗಳನ್ನು ಖರೀದಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ತಮ್ಮ ಮನೆಯನ್ನು ಆಲ್ಟ್ರೇಶನ್ ಮಾಡಿ ಮನೆ ಕಟ್ಟಿ ಉಳಿದ ಹಳೆ ಮನೆ ಆಗೆ ಇರುತ್ತದೆ.

ಸಾಕ್ಷಿಗೆ 1 ಛಾಯಾ ಚಿತ್ರ ತೋರಿಸಲಾಗಿ ಅದರಲ್ಲಿ ನೀಲಿ ಬಣ್ಣದ ಮನೆ ಪ್ರತಿವಾದಿಯರ ಹಳೆ ಮನೆ ಎಂದರೆ ಸರಿಯಲ್ಲ. ಸಾಕ್ಷಿ ಇನ್ನೊಂದು ಛಾಯಾಚಿತ್ರ ತೋರಿಸಿ ಸದರಿ ಛಾಯಾಚಿತ್ರದಲ್ಲಿ ಪ್ರತಿವಾದಿಯರು ಮನೆಯನ್ನು ಆಲ್ಟ್ರೇಶನ್ ಮಾಡಿ ಕಟ್ಟಿರುವ ಮಧ್ಯದ ಮನೆ ಎಂದರೆ ಸಾಕ್ಷಿ ಹೌದು ಎಂದು ಹೇಳಿದ್ದು ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ಛಾಯಾಚಿತ್ರದ ಮನೆಯ ದಕ್ಷಿಣ ದಿಕ್ಕಿಗೆ ಜ್ಯೋತಿ ಕೋಂ ಗಣೇಶ ರವರ ಮನೆ ಇರುತ್ತದೆ ಎಂದರೆ ಸಾಕ್ಷಿ ಅದು ನನ್ನ ಮನೆ ಎಂದು ನುಡಿಯುತ್ತಾರೆ. ನಾನು ಹೇಳಿದ ರೀತಿಯ ಮನೆ ನಿಡಿ-1 ಛಾಯಾಾಚಿತ್ರದಲ್ಲಿ ಇಲ್ಲ ಎಂದರೆ ಸರಿಯಲ್ಲ. ನಿಪಿ-1 ಖರೀದಿ ಪತ್ರದ ಪ್ರಕಾರ ನಿವೇಶನ

ಖರೀದಿಸಿದ ಬಗ್ಗೆ ಮಾಹಿತಿ ಇಲ್ಲ. ಆ ಸಮಯದಲ್ಲಿ ನಮ್ಮ ತಂದೆ ಯಾರಿಂದ ಹಣ ಪಡೆದುಕೊಂಡು ನಿವೇಶನಗಳನ್ನು ಖರೀದಿಸಿದ್ದರು ಎಂದು ಗೊತ್ತಿಲ್ಲ.

ನಿಪಿ-1 ಖರೀದಿ ಪತ್ರವನ್ನು ನನ್ನ ತಂದೆ ಮೋಸದಿಂದ ಸೃಷ್ಟಿ ಮಾಡಿಕೊಂಡ ಖರೀದಿ ಪತ್ರ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆ ಅವರ ಜೀವಿತವಾಧಿಯಲ್ಲಿ ನಿವೇಶನದ ಹತ್ತಿರ ಬಂದಿಲ್ಲ ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರವನ್ನು ಸೃಷ್ಟಿ ಮಾಡಿಕೊಂಡ ನಿವೇಶನ ಹತ್ತಿರ ಬಂದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಯರು ಸ್ವಾಧೀನದಲ್ಲಿದ್ದು ಅವರಿಗೆ ಸೇರಿದ 800 ಅಡಿ ಜಾಗ ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಸೇರಿದ 800 ಅಡಿ ಮನೆ ದಾವಾ ಸ್ವತ್ತಿನ ದಕ್ಷಿಣ ಮತ್ತು ಪಶ್ಚಿಮಕ್ಕೆ ಇರುತ್ತದೆ. ದಾವಾ ಸ್ವತ್ತಿನ ಮನೆಯ ವಿಸ್ತೀರ್ಣ 12*12 ಇರುತ್ತದೆ. ಕ್ರಯ ಪತ್ರದಲ್ಲಿ ನಿವೇಶನದ ಅಳತೆ 12*12 ಇರುತ್ತದೆ. ದಾವಾ ಸ್ವತ್ತಿನಲ್ಲಿ 12*12 ಅಳತೆಯ ಮನೆ ಇಲ್ಲ ಎಂದರೆ ಸರಿಯಲ್ಲ.

ಸದರಿ ಮನೆಯಲ್ಲಿ ಒಂದೇ ಬಾಗಿಲು ಇರುತ್ತದೆ. ಸದರಿ ಮನೆಯನ್ನು ಯಾವಾಗ ಕಟ್ಟಿರುತ್ತಾರೆ ಮತ್ತು ಗೃಹಪ್ರವೇಶ ಮಾಡಿದ ದಿನಾಂಕ ಗೊತ್ತಿಲ್ಲ. 2010 ರಲ್ಲಿ ಬಾಡಿಗೆ ಕೊಟ್ಟಿರುತ್ತೇನೆ ಆದರೆ ದಿನಾಂಕ ಗೊತ್ತಿಲ್ಲ. ದಾವಾ ಸ್ವತ್ತಿಗೆ 500 ಬಾಡಿಗೆ ಕೊಡುತ್ತಿದ್ದರು. ದಾವಾ ಸ್ವತ್ತಿಗೆ ಸಂಬಂಬಂದಿಸಿದಂತೆ ನಾನು ವಿದ್ಯುತ್ ಛಕ್ತಿ ಬಿಲ್ ಕಟ್ಟಿಲ್ಲ. ನಮ್ಮ ಮನೆಯ ಆರ್ ಆರ್ ಸಂಖ್ಯೆ ಗೊತ್ತಿಲ್ಲ. ಅದು ಯಾರ ಹೆಸರಿನಲ್ಲಿ ಇದೆ ಎಂದು ಗೊತ್ತಿಲ್ಲ. ದಾವಾ ಸ್ವತ್ತಿಗೆ ಸಂಬಂದಿಸಿದಂತೆ ವಿದ್ಯುತ್ ಛಕ್ತಿ ಸಂಪರ್ಕ ನನ್ನ ಹೆಸರಿನಲ್ಲಾಗಲೀ ಅಥವಾ ತಂದೆ ಹೆಸರಿನಲ್ಲಾಗಲೀ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂದಿಸಿದಂತೆ ನೀರಿನ ತೆರಿಗೆಯನ್ನು ಕಟ್ಟಿರುವುದಿಲ್ಲ.

ನಿಪಿ-2 ಇ ಖಾತೆಯಲ್ಲಿ ದಕ್ಷಿಣಕ್ಕೆ ಪುರುಶೋತಮ್ ರವರ ನಿವೇಶನ ಎಂದು ನಮೂದಿಸಲಾಗಿದೆ ಎಂದರೆ ಸರಿ. ದಾವಾ ಸ್ವತ್ತಿನ ಚಕ್ಕುಬಂದಿಯಲ್ಲಿ ಪ್ರತಿವಾದಿಯ ತಾಯಿ ಯಶೋದ ರವರ ಮನೆ ಮತ್ತು ನಿವೇಶನ ಇರುತ್ತದೆ ಎಂದರೆ ಸರಿಯಲ್ಲ. ಇ ಸ್ವತ್ತನ್ನು ಅಧಿಕಾರಿಗಳೊಂದಿಗೆ ಶಾಮೀಲಾಗಿ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನಗೆ ಸೇರಿದ ಮನೆ ಮತ್ತು ನಿವೇಶನ ಇಲ್ಲ ಎಂದರೆ ಸರಿಯಲ್ಲ. ನಿಪಿ-1 ಕ್ರಯ ಪತ್ರವನ್ನು ಶಿಕ್ಷಣ ಮುಗಿದ ನಂತರ ಮತ್ತು ತಂದೆ ತೀರಿ ಹೋದ ನಂತರ ನೋಡಿರುತ್ತೇನೆ.

ಮೂಲ ಕ್ರಯ ಪತ್ರ ಇನ್ನೊಂದು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಇದೇ ರೀತಿ ದಾವೆಯನ್ನು ಪ್ರತಿವಾದಿಯ ಅಣ್ಣ ಮತ್ತು ಹೆಂಡತಿಯ ವಿರುದ್ಧ ಅಸಲು ದಾವಾ ನಂ. 328/2021 ನ್ನು ದಾಖಲಿಸಿರುತ್ತೇನೆ. ಕಾಲಪರಿಮಿತಿ ಮೀರಿ ದಾವೆ ದಾಖಲಿಸಿರುವುದರಿಂದ ದಾವೆಯಲ್ಲಿ ಕೋರಿದ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಉತ್ತರಕ್ಕೆ ಚಿಕ್ಕಮಗಳೂರು ಹೆದ್ದಾರಿ ಬರುತ್ತದೆ ಎಂದರೆ ಸರಿ. ಸದರಿ ಹೆದ್ದಾರಿ ಹಾದು ಹೋಗಿರುವುದರಿಂದ ಕೆಲವು ಮನೆಗಳು ಹೆದ್ದಾರಿಗೆ ಹೋಗುತ್ತಿವೆ ಎಂದರೆ ಸರಿ. ಪ್ರತಿವಾದಿಯರಿಗೆ ಸೇರಿದ ಮನೆಯ ಮುಂದಿನ ಜಾಗ ಹೆದ್ದಾರಿಗೆ ಹೋಗಿದೆ ಎಂದರೆ ಸರಿ. ನಾನು ನಿಪಿ-1 ಕ್ರಯ ಪತ್ರದ ಮೂಲಕ ಖರೀದಿಸಿದ ನಿವೇಶನ ಇಲ್ಲ ಎಂದರೆ ಸರಿಯಲ್ಲ. ಆ ರೀತಿ ನಿವೇಶನ ಇಲ್ಲದೆ ಇದ್ದರು ಸಹ ಪ್ರತಿವಾದಿಯರ ಮನೆ ನಮಗೆ ಸೇರಿದ್ದು ಎಂದು ಸುಳ್ಳು ದಾವೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**(ಮುಂದುವರಿದ ಪಾಟೀ ಸವಾಲಿಗೆ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

(ನಾಗೇಂದ್ರ)
ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು